2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

**ಸಿ.ಸಿ. ನಂಃ 897/2016**

1) ಸರಕಾರದ ವತಿಯಿಂದ
ಅಥಣಿ ಪೋಲಿಸರಿಂದ.

....ಫಿರ್ಯಾದಿ

- ವಿರುದ್ದ -

1) ಹೆಸರು :
2) ವಯಾ :
3) ಉದ್ಯೋಗ :
4) ವಾಸಸ್ಥಳ :

...ಆರೋಪಿ

ದಂ.ಪ್ರ.ಸಂ.ಕಲಂಃ 313 ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ -1 ಈ ಪ್ರಕರಣದಲ್ಲಿ ಸಾಕ್ಷಿದಾರರು ನ್ಯಾಯಾಲಯದಲ್ಲಿ ನುಡಿದ ಸಾಕ್ಷ್ಯವನ್ನು ಕೇಳಿದಿರಾ?

ಉತ್ತರ :

ಪ್ರಶ್ನೆ 2: ಪಿಡಬ್ಲೂ 3. ಶ್ರೀ ನಾಗಪ್ಪಾ ಚೆನ್ನಪ್ಪಾ ದಾನಪ್ಪನ್ನವರ, ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 02.03.2016 ರಂದು ನಾನು ಜಪ್ತ ಮಾಡಿದ ಮಾದರಿಗಳನ್ನು ಪ್ರಾದೇಶಿಕ ರಾಸಾಯನಿಕ ವಿಶ್ಲೆಷಣೆಗೆಂದು ದಾರವಾಡ ವಲಯಕ್ಕೆ ಸಲ್ಲಿಸಿ, ದಿನಾಂಕಃ 14.03.2016 ರಂದು ಸದರಿ ವಿಶೇಷಕರು ನೀಡಿರುವ ವರದಿಯನ್ನು ಚಾಸಾ-5 ರವರಿಗೆ ಹಸ್ತಾಂತರಿಸಿರುತ್ತೇನೆ, ಸದರಿ ವರದಿಯನ್ನು ನಿಪಿ.2 ರಲ್ಲಿ ಗುರುತಿಸಿ, ಮಾದರಿ ಪರಿಶಿಲೀಸಿದ ನಂತರ ಎಫ್ ಎಸಎಲ್ ರವರು ನೀಡಿದ ರೀಪೊರ್ಟನ್ನು ನಿಪಿ.3 ಎಂದು ಗುರುತಿಸುತ್ತೇನೆ ಎಂದು ಸಾಕ್ಷ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 3: ಪಿಡಬ್ಲೂ 4. ಶ್ರೀ ಮುರಿಗೆಪ್ಪಾ ತಮ್ಮಣ್ಣಾ ಗಾಡಿವಡ್ಡರ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ14.05.2012 ಸಂಜೆ 04.30 ಗಂಟೆಗೆ ಕಚೇರಿ ಕರ್ತವ್ಯದಲ್ಲಿದ್ದಾಗ ನನಗೆ ಬಾತ್ಮಿ ಬಂದ ಮೇರೆಗೆ ನಾನು, ಚಾಸಾ 3 ಮತ್ತು 4 ರವರು ಸೇರಿ ಅಥಣಿ ಪಟ್ಟಣದ ಶ್ರೀ ಬಸವೇಶ್ವರ ಸರ್ಕಲನಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ನಮ್ಮ ಕಚೇರಿಗೆ ಬಂದು ಅವರಿಗೆ ಅಥಣಿ ತಾಲೂಕಿನ ಬಡವಾಡ ಗ್ರಾಮದ ಮಲ್ಲಯ್ಯ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮದ್ಯ ಮಾರಾಟ ಮಾಡುತಿದ್ದು, ಮದ್ಯವನ್ನು ಸಂಗ್ರಹಿಸಿರುತ್ತಾರೆ ಎಂದು ಕಚಿತವಾದ ಬಾತ್ಮಿ ಬಂತು.

ದಾಳಿ ಸಮಯದಲ್ಲಿ ಹಾಜರು ಇದ್ದು ಸವಿಸ್ತಾರ ಪಂಚನಾಮೆಯನು ಬರೆಯಲು ಕೇಳಿದ ಮೇರೆಗೆ ಅವರು ಒಪ್ಪಿಕೊಂಡು ಅಬಕಾರಿ ನಿರೀಕ್ಷಕರು ಮತ್ತು ನಾನು ಚಾಸಾ-3 ಮತ್ತು 4 ರವರು ನಮ್ಮ ಕಚೇರಿಯ ಸರ್ಕಾರಿ ವಾಹನವಾದ ಕೆ.ಎ 22 ಜಿ 457 ರಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ, ಸದರಿ ಮಲ್ಯಯ್ಯಾ ಗುಡಿಯ ಹತ್ತಿರದಲ್ಲಿರುವ ತಿಪ್ಪಿಯ ಹತ್ತಿರ ಹೊದಾಗ ಸಮಯ 06.30 ಆಗಿದ್ದು, ಸದರಿ ಸ್ಥಳದಲ್ಲಿ ನಮ್ಮ ಅದಿಕಾರಿಗಳೊಂದಿಗೆ ಶೊದನೆ ನಡೆಸಿ ವರದಿಯನ್ನು ತಯಾರಿಸಿ, ಸದರ ಸ್ಥಳದಲ್ಲಿ ತಿಪ್ಪಿಯಲ್ಲಿ ಕಬ್ಬಿನ ರವದಿಯಿಂದ ಕಳೆಗೆಡೆ ಒಟ್ಟು ನಾಲ್ಕು ಬಾಕ್ಸಗಳನ್ನು ಸಿಕ್ಕಿದ್ದು, ಪಂಚರ ಸಮಕ್ಷಮ ಓಟಿ ವಿಸ್ಕಿ 144X 180 ರಿಂದ ಹಾಗೂ ಬೆಂಗಳೂರು ಮಾಲ್ಡ ವಿಸ್ಕಿ 48X180 ಎಮ್ ಎಲ್ ನ ಟ್ರೆಟ್ಯಾ ಪ್ಯಾಕಗಳನ್ನು ಸಿಕ್ಕಿದ್ದು, ಅಲ್ಲಿಯೇ ಪಕ್ಕದಲ್ಲಿರುವ ಮನೆಗೆ ಹೋಗಿ ಅಲ್ಲಿ ಇದ್ದ ಒಬ್ಬ ವ್ಯಕ್ತಿಯನ್ನು ಹೊರಗೆ ಕರೆದ ಆತನ ಹೆಸರು ಕೇಳಲಾಗಿ ಆತನ ಹೆಸರು ಮಹದೇವ ಶೇಷಪ್ಪ ಮಾದರ, ಸಾಃ ಬಳವಾಡ ಎಂದು ತಿಳಿಸಿರುತ್ತಾರೆ. ಆತನಿಗೆ ತಿಪ್ಪಿಯಲ್ಲಿ ಬಿದ್ದಿರುವ ಮದ್ಯದ ಪ್ಯಾಕಗಳನ್ನು ಯಾರದ್ದು ಅಂದು ಕೇಳಿದಾಗ ಆತನು ತಡವರಿಸುತ್ತಾ ನನ್ನದೇ ಇರುತ್ತದೆ ಮತ್ತು ನಾನು ನನ್ನ ಸ್ವಂತ ಪಾಯ್ದೆ ಗೊಸ್ಕರ ಮಾರಾಟ ಮಾಡಲು ಇಟ್ಟಿರುತ್ತೇನೆ ಎಂದು ಸಾಕ್ಷ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 4: ಪಿಡಬ್ಲೂ 4. ಶ್ರೀ ಮುರಿಗೆಪ್ಪಾ ತಮ್ಮಣ್ಣಾ ಗಾಡಿವಡ್ಡರ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರೋಪಿತರನ್ನು ಕರೆದುಕೊಂಡು ಬಂದು ತಿಪ್ಪಿ ಹತ್ತಿರ ಪಂಚರ ಸಮಕ್ಷಮ 3 ಬಾಕ್ಸನಲ್ಲಿ ಓಟಿ ವಿಸ್ಕಿ 1X 180 ಎಮ್ ಎಲ್ ಹಾಗೂ ಬೆಂಗಳೂರು ಮಾಲ್ಡ ವಿಸ್ಕಿ 1X180 ಎಮ್ ಎಲ್ ನ ಟ್ರೆಟ್ಯಾ ತಲಾ ಒಂದು ಟ್ರೆಟ್ಯಾ ಪ್ಯಾಕೇಟಗಳುಒಂದು ಟ್ರೆ ಟ್ಯಾ ಪ್ಯಾಕೇಟಗಳನು ತೆಗದು ಅವುಗಳನ್ನು ಬಟ್ಟೆಯಲ್ಲಿ ಸುತ್ತಿ ಅರಗನ್ನು ಅಂಟಿಸಿ ಪಂಚರ ಸಮಕ್ಷಮ ಸೀಲ್ ಮಾಡಲಾಗಿದೆ. ಅವುಗಳಲ್ಲಿ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದ್ದು, ಸದರಿ ಮುದ್ದೆಮಾಲಗಳನ್ನು ಗುರುತಿಸಿರುತ್ತೇನೆ ಕಾರಣ ಅದನ್ನು ಮುದ್ದೆಮಾಲನ್ನು 1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಮುದ್ದೆಮಾಲಿನಲ್ಲಿರುವ ನನ್ನ ಸಹಿಯನ್ನು ಗುರುತಿಸುತ್ತೇನೆ ಕಾರಣ ಅದನ್ನು ಮುದ್ದೆಮಾಲು ನಂ.1 ಎ ಎಂದು ಗುರುತಿಸಲಾಯಿತು. ಆ ನಂತರ ಜಪ್ತ ಮಾಡಿದ ಮುದ್ದೆ ಮಾಲು, ಆರೋಪಿತರನ್ನು ನಮ್ಮ ತಾಬಾಕ್ಕೆ ತೆಗೆದುಕೊಂಡು ಗುನ್ನಾ ಸ್ಥಳದ ಚಕಬಂದಿಯನ್ನು ತಯಾರಿಸಿ ಅದೇ ದಿನ ಬ್ಯಾಟರಿ ಬೆಳಕಿನಲ್ಲಿ ಸಂಜೆ 06.30 ರಿಂದ 07.30 ರವ ರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿ, ಸಹಿಯನ್ನು ನಿಪಿ1.ಸಿ ಎಂದು ಗುರುತಿಸಿ, ಆ ನಂತರ ಜಪ್ತ ಮಾಡಿದ ಮುದ್ದೆಮಾಲ ಮತ್ತು

ಅರೋಪಿತರನ್ನುಸರ್ಕಾರದ ತರ್ಫೆ ದೂರನ್ನು ದಾಖಲಿಸಿ ರಿಮಾಂಡ ಯಾದಿಯೊಂದಿಗೆ ಚಾಸಾ-4 ರವರಿಗೆ ಆರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ ನಾನು ದಾಖಲಿಸಿದ ಪಿರ್ಯಾದಿಯನ್ನು ಗುರುತಿಸುತ್ತೇನೆ ಆದ ಕಾರಣ ಅದನ್ನು ನಿಪಿ4 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 6 ರವರಿಗೆ ಮುಂದಿನ ತನಿಖೆಗಾಗಿ ಕಡತಗಳನ್ನು ಮತ್ತು ಮುದ್ದೆಮಾಲಗಳನ್ನು ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ ?

ಉತ್ತರ :

ಪ್ರಶ್ನೆ 5: ಪಿಡಬ್ಲೂ. 5 – ಶ್ರೀ. ಬಾಹುಬಲಿ ಎಮ್.ಸವದಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ07.08.2015 ರಿಂದ 30.05.2020 ರ ವರೆಗೆ ಅಥಣಿ ವಲಯ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ, ದಿನಾಂಕಃ14.12.2015 ರಂದು ಸಂಜೆ 04.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-5 ರವರು ನನಗೆ ಅಥಣಿ ತಾಲೂಕಿನ ಬಲವಾಡ ಗ್ರಾಮದ ಮಲ್ಲಯ್ಯ ಗುಡಿಯ ಹತ್ತಿರ ರಸ್ತೆಯ ಪಕ್ಕದ ತಿಪ್ಪಿ ಯಲ್ಲಿ ಮದ್ಯ ಸಂಗ್ರಹಿಸುತ್ತಿದ್ದ ಕೊಂಡ ಬಂದ ಮೇರೆಗೆ ಬಗ್ಗೆ ಬಾತ್ಮಿ ತಿಳಿಸಿರುತ್ತಾರೆ ಚಾಸಾ-5 ಮತ್ತು ಪಂಚರನ್ನು ಕರೆದುಕೊಂಡು ನಾನು ಹಾಗೂ ಚಾಸಾ-5 ರವರು ನಮ್ಮ ಇಲಾಖಾ ವಾಹನದ ನಂ.ಕೆಎ 22 ಜಿ 457 ರಲ್ಲಿ ಕುಳಿತು ಬಳವಾಡ ಗ್ರಾಮದ ಮಲ್ಲಯ್ಯ ಗುಡಿಯ ಹತ್ತಿರ ತಿಪ್ಪಿಯ ಹತ್ತಿರ ಹೋದಾಗ ಸುಮಾರು 6.30 ಗಂಟೆ ಆಗಿದ್ದು, ಸದರಿ ಸ್ಥಳವನ್ನು ಪರಿಶೀಲಿಸುವ ಮುನ್ನ ಶೋಧನಾ ಸಮ್ಮುಚಿತ ಆಧಾರವನ್ನು ತಯಾರಿಸಿ, ಸದರಿ ತಿಪ್ಪಿಯನ್ನು ಪರಿಶೀಲಿಸಲಾಗಿ ಕಬ್ಬಿಣದ ರವದಿಯ ಕೆಳಗೆ 4 ಮದ್ಯಂ ಬಾಕ್ಸಗಳು ಕಂಡು ಬಂದಿದ್ದು, ಅವುಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ 3 ಬಾಕ್ಸಗಳಲ್ಲಿ Oti ವಿಸ್ಕಿಯೆಂದು ಬರೆದಿರುವ 180 ಎಮ್.ಎಲ್. 144 ಟೆಟ್ರಾ ಪ್ಯಾಕಗಳು ಇನ್ನೊಂದು ಬಾಕ್ಸನಲ್ಲಿ ಬರೆದಿರುವ ಬೆಂಗಳೂರು ಮಾಲ್ಡ ವಿಸ್ಕಿಯೆಂದು ಬರೆದಿರುವ 180 ಎಮ್ ಎಲ್ ನ 48 ಟಾಟ್ರಾ ಪ್ಯಾಕಗಳು ಇದ್ದವು ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರ :

ಪ್ರಶ್ನೆ 6: ಪಿಡಬ್ಲೂ. 5 - ಶ್ರೀ ಬಾಹುಬಲಿ ಎಮ್.ಸವದಿ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-5 ರವರು ಪಕ್ಕದಲ್ಲಿ ಮನೆಯವರನ್ನು ವಿಚಾರಿಸಿದಾಗ ಆತನ ಹೆಸರು ಮಹದೇವ ಶೇಷಪ್ಪ ಮಾದರ, ಸಾಃ ಬಳವಾಡ ಎಂದು ತಿಳಿಸಿರುತ್ತಾರೆ. ಚಾಸಾ-5 ರವರು ಆತನಿಗೆ ತಿಪ್ಪಿಯಲ್ಲಿರುವ ಮದ್ಯದ ಬಾಕ್ಸಗಳು ಯಾರಿಗೆ ಸೇರಿದ್ದು ಅಂದು ಕೇಳಿದಾಗ ಆತನು ತಡವರಿಸುತ್ತಾ ನನ್ನದೇ ಇರುತ್ತದೆ ಮತ್ತು ನಾನು ನನ್ನ ಸ್ವಂತ ಪಾಯ್ದಿ ಗೊಸ್ಕರ ಮಾರಾಟ

ಮಾಡಲು ಇಟ್ಟಿರುತ್ತೇನೆ, ಚಾಸಾ-5 ರವರು ಪಂಚರ ಸಮಕ್ಷಮ 180 ಎಮ್.ಎಲ್. ನ ಒಂದು Oti ವಿಸ್ಕಿ ಟೆಟ್ರಾ ಪ್ಯಾಕ ಮತ್ತು 180 ಎಮ್.ಎಲ್. ನ ಬೆಂಗಳೂರು ಮಾಲ್ಟ ವಿಸ್ಕಿ ಒಂದು ಟೆಟ್ರಾ ಪ್ಯಾಕಗಳಲ್ಲಿ ರಾಸಾಯನಿಕ ಪರಿಕ್ಷೇಗಾಗಿ ಶ್ಯಾಂಪಲ ತೆಗೆದು ಅವುಗಳನ್ನು ಪಂಚರ ಸಮಕ್ಷಮ ಬೀಳಿ ಅರಬಿಯನ್ನು ಸುತ್ತಿ ಮೊಹರಿನೊಂದಿಗೆ ಸಿಲ್ ಮಾಡಿರುತ್ತಾರೆ. ಆ ನಂತರ ಚಾಸಾ-5 ರವರು ಸದರಿ ಸ್ಥಳದಲ್ಲಿ ಪಂಚರ ಸಚುಕ್ಷಮ ಪಂಚನಾಮೆ ಜರುಗಿಸಿ ಆರೋಪಿತನನ್ನು ಮತ್ತು ಮುದ್ದೆಮಾಲನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರ :

ಪ್ರಶ್ನೆ 7: ಪಿಡಬ್ಲೂ.6 - ಶ್ರೀ ವಾಸುದೇವ ಶಂಕರ ಕಾಂಬಳೆ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 14.12.2015 ರಂದು ಚಾಸಾ-5 ರವರಿಂದ ಕಡತವನ್ನು ಪಡೆದುಕೊಂಡು ಚಾಸಾ-4 ರವರಿಂದ ದಿಃ 29.09.2016 ರಲ್ಲಿ ಚಾಸಾ-4 ರವರು ಮುದ್ದೆಮಾಲನ್ನು ರಾಸಾಯನಿಕ ಪರೀಕ್ಷಗೆ ತೆಗೆದುಕೊಂಡು ಹೋಗಲು ನೇಮಕಮಾಡಿ, ಆ ಬಗ್ಗೆ ಮನವಿ ಪತ್ರದ ಕಛೇರಿ ಪತ್ರವನ್ನು ಹಾಜರು ಪಡಿಸಿ, ನಿಪಿ-5 ಎಂದು ಗುರುತಿಸಿ, ಚಾಸಾ-3 ರವರ ಹೇಳಿಕೆ ಪಡೆದಿರುತ್ತೇನೆ. ಆ ನಂತರ ದಿಃ04.03.2016 ರಂದು ಎಫಎಸಎಲ ವರದಿಯನ್ನು ಪಡೆದುಕೊಂಡು ಚಾಸಾ-4 ರವರು ನನಗೆ ಹಸ್ತಾಂತರಿಸಿರುತ್ತಾರೆ. ಸದರಿ ಹೇಳಿಕೆ ಪತ್ರವನ್ನು ದಿಃ 14.05.2016 ರಂದು ಪಡೆದು, ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಿ, ನಿಪಿ-2 ರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿ, ಸದರಿ ಆರೋಪಿತರ ವಿರುದ್ದ ದಿಃ13.06.2016 ರಲ್ಲಿ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರ :

ಪ್ರಶ್ನೆ 8: ನಿನ್ನ ಪರ ಸಾಕ್ಷ್ಯ ವಿಚಾರಣೆ ಮಾವಿಯಾ ?

ಉತ್ತರ

ಪ್ರಶ್ನೆ 9: ನಿಮಗೆ ಇನ್ನೂ ಹೆಚ್ಚಿಗೆ ಏನನ್ನಾದರೂ ಹೇಳುವುದು ಇದೆಯಾ ?

ಉತ್ತರ

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಅಥಣಿ.

## ದಂ.ಪ್ರ.ಸಂ.ಕಲಂಃ 281 ರಡಿಯಲ್ಲಿ ಪ್ರಮಾಣ ಪತ್ರ

ಸಾಕ್ಷ್ಯದಲ್ಲಿ ಆರೋಪಿತರ ವಿರುದ್ದ ಕಂಡು ಬಂದ ಅಂಶಗಳನ್ನು ಸಿ.ಆರ್.ಪಿ.ಸಿ. ಕಲಂಃ 313 ರಡಿಯಲ್ಲಿ ಪ್ರಶ್ನೆಗಳನ್ನು ರಚಿಸಿ, ಆರೋಪಿತರಿಗೆ ನ್ಯಾಯಾಲಯದಲ್ಲಿ ಓದಿ ತಿಳಿಸಿ, ಪ್ರಶ್ನಿಸಿ ಕೇಳಲಾಯಿತು, ಆರೋಪಿತರ ಸದರಿ ಪ್ರಶ್ನೆಗಳನ್ನು ತಿಳಿದುಕೊಂಡು ಉತ್ತರವನ್ನು ಕೊಟ್ಟಿರುತ್ತಾರೆ. ಆರೋಪಿತರ ಹೇಳಿಕೆಯಂತೆಯೇ ಉತ್ತರವನ್ನು ಬರೆದುಕೊಳ್ಳಲಾಗಿದೆ.

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಅಥಣಿ.